ಬಂದಿದ್ದೇವೆ. ಜಂಟಿ ಸದನ ಸಮಿತಿ ಮಾಡಿದಿರಿ, ಎಲ್ಲವನ್ನೂ ಮಾಡಿದಿರಿ. ನಮ್ಮದು ಆಸೆ ಏನಿತ್ತು ಎಂದರೆ ಇಲ್ಲಿ ಆಗ ಮುಖ್ಯಮಂತ್ರಿಗಳಾಗಿ ಮಾನ್ಯ ದೇವೆಗೌಡರು ಹೇಳಿದರು; ವೀರಮಣಿ ಇವನು ಸುಮಾರು 1000 ಕೋಟಿ ರೂ.ಗಳನ್ನು ಸರ್ಕಾರದ ಖಜಾನೆಗೆ ಬರುವ ಹಣವನ್ನು ಲೂಟಿ ಮಾಡಿದ ಇದನ್ನು ನಾನು ಬಹಿರಂಗ ಮಾಡುವಂತಹ ಪ್ರಯತ್ನ ಮಾಡಿದೆ ಎಂದು ಹೇಳಿದ್ದು ರೆಕಾರ್ಡ್‌ನಲ್ಲಿದೆ. ಈಗ ಚರ್ಚೆಯಾದ ಮೇಲೆ ತಾವು ಮಾಡಿರುವ ಆಜ್ಞೆಯನ್ನು ನೋಡಿದಾಗ ಅದನ್ನು ವಿತ್‌ಡ್ರಾ ಮಾಡಿ ಎಂದು ನಾವು ಇಷ್ಟು ಹೊತ್ತು ಒತ್ತಾಯ ಮಾಡಿದೆವು. ಆದರೆ ಇದಕ್ಕೆ ನೀವು ಸಿದ್ದರಾಗಿಲ್ಲ. ಕೋರ್ಟ್‌ಗೆ ಸರಿಯಾದ ರೀತಿಯಲ್ಲಿ ಗಮನಕೊಟ್ಟಿಲ್ಲ ಅದಕ್ಕೊಸ್ಕರ ತಾವು ಹೊರಡಿಸಿರುವ ಈ ಆಜ್ಞೆಯನ್ನು ವಿತ್ ಡ್ರಾ ಮಾಡಿಕೊಂಡು ಎಲ್ಲಾ ವ್ಯವಹಾರಗಳನ್ನು... ಈಗ ನೀವೇ ಬಹಿರಂಗ ಮಾಡಿ ಬಿಟ್ಟರೆ ಏನೆಂದರೆ ಕಾಂಗ್ರೆಸ್‌ರವರ ಕಾಲದಿಂದಲೂ ಅವ್ಯವಹಾರವಾಗಿದೆ. ಇದು ನಿರ್ವಿವಾದ ಇದು ನಿಜ 85ರಿಂದ ನಡೆದಿರುವ ಕಳೆದ 5 ವರ್ಷಗಳಿಂದ ಗ್ಯಾನೈಟ್ ವ್ಯವಹಾರದ ಬಗ್ಗೆ ಸಿಬಿಐ ಗೆ ರೆಫರ್ ಮಾಡಿ; 1983ರಿಂದ ರೆಫರ್ ಮಾಡಿ, ಇದಂತೂ ನಿಶ್ಚಿತ ತಮ್ಮ ಕಾಂಗ್ರೆಸ್‌ನವರು ಏನು ಮಾಡಿದಿರೋ ಅದೇ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಅದೇ ಗ್ಯಾನೈಟ್ ಲಾಭಿಗೆ ನೀವು ಮಣಿದಿದ್ದೀರಿ, ಅವರು 500 ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದರೆ ನೀವು ಒಂದು 500 ಕೋಟಿ ರೂ.ಗಳನ್ನು ಸರ್ಕಾರದ ಖಜಾನೆಗೆ ಬರುವುದನ್ನು ಲೂಟಿಯಾಗಿದೆ. ಈ ಕಾಂಗ್ರೆಸ್, ಜನತಾ ದಳ ಎರಡು ಸೇರಿ ಒಂದು ಸಾವಿರ ಕೋಟಿ ರೂ.ಗಳನ್ನು ಗ್ಯಾನೈಟ್‌ನಿಂದ ಸರ್ಕಾರದ ಬೊಕ್ಕಸಕ್ಕೆ ಬರುವುದನ್ನು ತಪ್ಪಿಸಿದ್ದೀರಿ, ಲೂಟಿ ಆಗುವುದಕ್ಕೆ ನೀವು ಎಲ್ಲರೂ ಶಾಮೀಲಾಗಿದ್ದೀರಿ, ಇದನ್ನು ಪ್ರತಿನಿಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ.ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಧ್ಯಕ್ಷರೆ, ನನ್ನ ಪಾಯಿಂಟ್ ಇಷ್ಟೆ ಒಂದು ಕ್ಯಾಬಿನೆಟ್ ತೀರ್ಮಾನ ಆಗಬೇಕಾಗಿತ್ತು. ರೆವಿನ್ಯೂ, ಫಾರಸ್ಟ್ ಮತ್ತು ಮೈನ್ಸ್ ಅಂಡ್ ಜಿಯಾಲಜಿ ಈ ಮೂರು ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ಇದಕ್ಕೆ ಕ್ಯಾಬಿನೆಟ್ ತೀರ್ಮಾನ ಆಗಬೇಕಾಗಿತ್ತು. ಆದರೆ ಅದರ ಬದಲು ಒಂದು ಇಲಾಖೆ ತೀರ್ಮಾನ ಮಾಡಿರುವುದು ಸರಿಯಲ್ಲ. ಇದಕ್ಕೆ ಮಾನ್ಯ ನಾಣಯ್ಯನವರು ಏನೂ ಹೇಳಲಿಲ್ಲ. ಕ್ಯಾಬಿನೆಟ್ ತೀರ್ಮಾನ ಮಾಡಬೇಕೋ ಅಥವಾ ಬೇಡವೋ ಎಂದು ಅವರು ಏನೂ ಹೇಳಲಿಲ್ಲ. ಎರಡನೆಯದಾಗಿ ಹೈಕೋರ್ಟ್ 25 ಪರ್ಸೆಂಟ್ ಎಫ್‌ಓಬಿ ತೆಗೆದುಕೊಳ್ಳಿ ಎಂದರೆ ಇವರು 2 ವರ್ಷಕ್ಕೆ ಸೇರಿ 10 ಕೋಟಿ 60 ಲಕ್ಷ ಮಾಡಿರತಕ್ಕಂಥದ್ದು. ಇದಕ್ಕೆ ಇವರು ಏನು ಸಮರ್ಥನೆ ಕೊಡುತ್ತಾರೆಂದರೆ ಅವರು ಅಪೀಲ್ ಹಾಕಿದ್ದಾರೆನ್ನುವುದು. ನೀವು ಜಾಯಿಂಟ್ ಮೆಮೋ ಹಾಕಿದ್ದೀರೋ along with your government advocate. ಈ ರೀತಿ ಮಾಡಿರುವುದರಿಂದ ಸರ್ಕಾರ ಇದರಲ್ಲಿ ಸಂಪೂರ್ಣವಾಗಿ ಶಾಮೀಲಾಗಿದೆ ಎನ್ನುವಂತಹ ವಿಷಯದಲ್ಲಿ